

# ಬುಕ್‌ಮಾರ್ಕ್ ತಯಾರಿಸಿ

ಈ ವಿಡಿಯೋದಲ್ಲಿ ನೀವು ಬುಕ್‌ಮಾರ್ಕ್ ಹೇಗೆ ಮಾಡುವುದು ಎಂಬುದನ್ನು ಕಲಿಯುತ್ತೀರಿ. ಈಗಾಗಲೇ ಕಲಿತಿರುವ ಹೊಲಿಗೆ ಪಾಠಗಳ ನಂತರ ಬುಕ್‌ಮಾರ್ಕ್ ಕಲಿಯುವುದು ಬಹಳ ಸುಲಭ.



ಇದಕ್ಕೆ ನಿಮಗೆ ಬೇಕಾಗಿರುವುದು–

- 8 ಇಂಚು ಉದ್ದ ಮತ್ತು 2 ಇಂಚು ಅಗಲದ ಎರಡು ಬಟ್ಟೆ
- 6 ಇಂಚು ಉದ್ದ ಮತ್ತು 2 ಇಂಚು ಅಗಲದ ಬಟ್ಟೆ ತುಂಡು
- 4 ಇಂಚು ಉದ್ದ ಮತ್ತು 2 ಇಂಚು ಅಗಲದ ಒಂದು ಫೆಲ್ಟ್

ಜೊತೆಗೆ ಒಂದು ಕುಚ್ಚು, ಅದನ್ನು ನೀವೇ ಮಾಡಬಹುದು ಅಥವಾ ಅಂಗಡಿಯಿಂದ ತರಬಹುದು.



ಎಲ್ಲಾ ಬಟ್ಟೆ ತುಂಡುಗಳ ಅಂಚುಗಳನ್ನು ಪಿಂಕಿಂಗ್ ಶಿಯರ್ ಉಪಯೋಗಿಸಿ ಕತ್ತರಿಸಿ. ಇದರಲ್ಲಿ ಕತ್ತರಿಸುವುದರಿಂದ ಅಂಚುಗಳು ಜಿಗ್‌ಜಾಗ್ ರೂಪವನ್ನು ಪಡೆಯುತ್ತವೆ. ಬಟ್ಟೆ ಅಸ್ತವ್ಯಸ್ತವಾಗುವುದಿಲ್ಲ.

ಆನಂತರ ಎರಡು ದೊಡ್ಡ ಬಟ್ಟೆ ತುಂಡುಗಳನ್ನು ತೆಗೆದುಕೊಂಡು ಅವುಗಳ ಹಿಂಬದಿಯನ್ನು/ಸರಿಯಿಲ್ಲದ ಭಾಗವನ್ನು ಹಿಂದಿನಿಂದ ಹಿಂದಕ್ಕೆ/ಬ್ಯಾಕ್ ಟು ಬ್ಯಾಕ್ ಸೇರಿಸಿ. ನಂತರ ಎರಡು ಸಣ್ಣ ಬಟ್ಟೆ ತುಂಡುಗಳನ್ನು ತೆಗೆದುಕೊಂಡು ದೊಡ್ಡ ಬಟ್ಟೆ ತುಂಡುಗಳ ಮೇಲುತುದಿಯಲ್ಲಿ ಮುಂಬದಿ/ಸರಿಯಾದ ಭಾಗ ಮೇಲೆ ಕಾಣುವಂತೆ ಜೋಡಿಸಿ.

ಎಲ್ಲಾ ಬಟ್ಟೆ ತುಂಡುಗಳನ್ನೂ ಒಟ್ಟಿಗೆ ಸೇರಿಸಿ ಮಣಿಪಿನ್ನಿನಿಂದ ಭದ್ರಪಡಿಸಿ. ನಂತರ ದೊಡ್ಡ ಬಟ್ಟೆ ತುಂಡಿನ ಮೇಲೆ ಎರಡು ಚಿಕ್ಕ ತುಂಡುಗಳನ್ನು ಈ ರೀತಿ ಇಡಿ. ಪಿನ್ನುಗಳಿಂದ ಇದನ್ನು ಭದ್ರಪಡಿಸಿ, ಎರಡು ಬಟ್ಟೆ ಪದರಗಳ ತುಟ್ಟತುದಿಯ ಮಧ್ಯದಲ್ಲಿ ಇರುವಂತೆ ಕುಚ್ಚು ಸೇರಿಸಿ, ಪಿನ್ ಚುಚ್ಚಿ ಅದನ್ನು ಭದ್ರಪಡಿಸಿ.




ಈ ಸಿದ್ಧತೆಗಳೆಲ್ಲಾ ಆದ ಮೇಲೆ ಬುಕ್‌ಮಾರ್ಕ್ ಮಾಡಲು ನೀವು ಸಿದ್ಧರಾಗಿದ್ದೀರಿ.

ಬಟ್ಟೆಯನ್ನು ಫುಟ್‌ನ ಕೆಳಗೆ, ಹೊಲಿಯುವ ಜಾಗಕ್ಕೆ ಸರಿಯಾಗಿ ಇಟ್ಟು, ಪ್ರೆಷರ್ ಫುಟ್‌ನ್ನು ಕೆಳಕ್ಕೆ ಮಾಡಿ.

ಈಗ ಸ್ಟಿಚ್ ಪ್ಯಾಟರ್ನ್ ಪೈಕಿ ಒಂದನ್ನು ಆಯ್ಕೆ ಮಾಡಿ. ಇಲ್ಲಿ ನಾವು 'ಡಿ' ನಮೂನೆಯನ್ನು ಆರಿಸಿದ್ದೇವೆ. ಪ್ಯಾಟರ್ನ್ ಸೆಲೆಕ್ಟರ್ ನಾಬ್‌ನ್ನು 'ಡಿ' ಗೆ ಇಡಿ.

ಸ್ಟಿಚ್ ಲೆಂಗ್ತ್ ಸೆಲೆಕ್ಟರ್‌ಗೆ ಹೋಗಿ, ಬೇಕಾದಂತಹ ಅಲಂಕೃತ ಹೊಲಿಗೆಯನ್ನು ಆಯ್ಕೆ ಮಾಡಲು ಡಯಲನ್ನು ಎಸ್‌ಎಸ್ ಮೋಡ್‌ಗೆ ನಿಗದಿಪಡಿಸಿ.



ಈಗ ಹೊಲಿಯಲು ಪ್ರಾರಂಭಿಸಿ, ಕ್ರಮೇಣ ವೇಗವನ್ನು ಹೆಚ್ಚಿಸಿ. ನೀವು ಹೊಲಿಯುತ್ತಿರುವ ಬಟ್ಟೆಯು ಪ್ರೆಷರ್ ಫುಟ್‌ಗೆ ಸರಿಹೊಂದುತ್ತಿದ್ದು, ಹೊಲಿಗೆ ಯಂತ್ರವು ನೀವು ಬಯಸಿದ ಪ್ಯಾಟರ್ನ್ ಮಾಡುತ್ತಿದೆ ಎಂಬುದನ್ನು ಖಚಿತಪಡಿಸಿಕೊಳ್ಳಿ. ಹೊಲಿಗೆಗೆ ಅಡ್ಡಬರುವ ಪಿನ್ನುಗಳನ್ನು ತೆಗೆಯಲು ಮರೆಯಬೇಡಿ.

ಸೂಜಿಯನ್ನು ಕೆಳಕ್ಕೆ ಮಾಡಿಕೊಂಡು ಹೊಲಿಯುತ್ತಾ ಬಟ್ಟೆಯ ತುದಿಯವರೆಗೆ ಬಂದಾಗ, ಪ್ರೆಷರ್ ಫುಟ್ ಮೇಲಕ್ಕೆ ಮಾಡಿ. ನಂತರ ಬಟ್ಟೆಯನ್ನು ಬಹಳ ಜಾಗ್ರತೆಯಿಂದ ತಿರುಗಿಸಿ, ಅದನ್ನು ಕೊನೆಯ ತುದಿಗೆ ಸರಿಹೊಂದಿಸಿ. ಇದಾದ ಮೇಲೆ ಹೊಲಿಗೆಯನ್ನು ಮುಂದುವರಿಸಿ, ಎಲ್ಲಾ ಮೂರು ಬದಿಗಳನ್ನೂ ಹೊಲಿಯಿರಿ.

ಮೇಲ್ಭಾಗಕ್ಕೆ ಬರುತ್ತಿದ್ದಂತೆಯೇ, ಕುಚ್ಚಿಗೆ ಹಾಕಿದ ಪಿನ್ ತೆಗೆಯಿರಿ. ಕುಚ್ಚು ಆಚೆ-ಈಚೆ ಜರುಗುತ್ತಿಲ್ಲ ಎಂಬುದನ್ನು ಖಚಿತಪಡಿಸಿಕೊಂಡು ಬುಕ್‌ಮಾರ್ಕ್‌ನ ಸುತ್ತಲೂ ಹೊಲಿದು ಪೂರ್ಣಗೊಳಿಸಿ.

ಬುಕ್‌ಮಾರ್ಕ್ ಹೊರತೆಗೆದು ಬಟ್ಟೆಯಲ್ಲಿ ಉಳಿದಿರುವ ಹೆಚ್ಚುವರಿ ದಾರಗಳನ್ನು ಕತ್ತರಿಸಿ, ಅಚ್ಚುಕಟ್ಟಾಗಿ ಟ್ರಿಮ್ ಮಾಡಿ.



ಈಗ ನಿಮ್ಮ ಬುಕ್‌ಮಾರ್ಕ್ ಸಿದ್ಧವಾಗಿದೆ. ಹೊಲಿಗೆಯ ಪ್ಯಾಟರ್ನ್ ನೋಡಿ. ಅದೊಂದು ಡಿಸೈನ್‌ನ ಭಾಗ ಅಂತ ನಿಮಗೆ ಅನಿಸುತ್ತದೆ.

ನಿಮ್ಮ ಕಲ್ಪನಾಶಕ್ತಿಯನ್ನು ಉಪಯೋಗಿಸಿ ವಿವಿಧ ಬಗೆಯ ಬುಕ್‌ಮಾರ್ಕ್‌ಗಳನ್ನು ಸೃಷ್ಟಿಸಿ. ಬಟ್ಟೆ ಮತ್ತಿತರ ಸಾಮಗ್ರಿಗಳಿಂದ ಪ್ರಯೋಗಗಳನ್ನು ಮಾಡಿ.

ಪ್ರತಿಯೊಂದು ಬುಕ್‌ಮಾರ್ಕ್‌ಗೂ ಸೃಜನಾತ್ಮಕ ಕಲ್ಪನಾಶಕ್ತಿ ಬಳಸಿ ಒಂದು ವಿಶಿಷ್ಟ ಉಡುಗೊರೆ ವಸ್ತುವನ್ನು ತಯಾರಿಸಿ.